**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**
**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 2143/2022**

ಚಾ.ಸಾ–13, ಪ್ರಾ.ಸಾ–05

| | | |
|---|---|---|
| ಹೆಸರು | : | ಗೋವಿಂದರಾಜು ಕೆ.ವಿ. |
| ತಂದೆಯ ಹೆಸರು | : | ವಾಸುದೇವ್ ಡಿ.ಆರ್. |
| ವಯಸ್ಸು | : | 41 |
| ವೃತ್ತಿ | : | ಪೊಲೀಸ್ ಮುಖ್ಯಪೇದೆ,<br>ಕೆ.ಆರ್. ನಗರ ಪೊಲೀಸ್ ಠಾಣೆ |
| ವಾಸ | : | ಮೈಸೂರು |

**ದಿನಾಂಕ 08.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

[

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ತಿ. ನರಸೀಪುರದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ 2021 ರಿಂದ 2025 ರವರೆಗೆ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 19.07.2022 ರಂದು ಮಧ್ಯಾಹ್ನ 1.30 ಗಂಟೆಗೆ ಚಾಸಾ–14 ರವರು ನನ್ನನ್ನು ಮತ್ತು ಇತರ ಪೊಲೀಸ್ ಸಿಬ್ಬಂದಿಗಳನ್ನು ಎರಡು ಖಾಸಗಿ ವಾಹನಗಳಲ್ಲಿ ಚಾಮರಾಜನಗರದ ಕಡೆಗೆ ದಾಳಿ ಮಾಡಲು ಕರೆದುಕೊಂಡು ಹೋಗಿದ್ದರು. ಮಧ್ಯಾಹ್ನ 3.30 ಗಂಟೆಗೆ ಚಾಮರಾಜನಗರ ತಾಲ್ಲೂಕಿನ ಬಿಸಲುವಾಡಿ ಗ್ರಾಮದ ಚರ್ಚ್ ಬಳಿ ಇರುವ ಖಾಲಿ ಜಾಗದಲ್ಲಿ ಟೆಂಟ್ ಹಾಕಿದ್ದು, ಅಲ್ಲಿಗೆ ನಾವು ದಾಳಿ ಮಾಡಿ ಆರೂ ಜನ ಹುಡುಗರನ್ನು ಹಿಡಿದುಕೊಂಡೆವು. ಅವರನ್ನು ವಿಚಾರಿಸಲಾಗಿ, ಅವರ ಹೆಸರುಗಳು ಕಬ್ಬಾಳ್,

ಸಿಸಿ ಸಂಖ್ಯೆ: **2143/2022**

ಬಸವರಾಜು, ಪಿಚಗುನ್ನಾ, ಕೃಷ್ಣ, ವಿಜಯ್‌ಕುಮಾರ್ ಮತ್ತು ಮಂಜ ಅಲಿಯಾಸ್ ಮಂಜುನಾಥ್ ಎಂದು ತಿಳಿದು ಬಂತು.

ಅವರನ್ನು ಕಳ್ಳತನದ ಕುರಿತು ವಿಚಾರಿಸಲಾಗಿ ಅವರು ಒಪ್ಪಿದ್ದು, ಪಂಚರಾದ ಫ್ರಾಸಾ-4 ಮತ್ತು ಚಾಸಾ-5 ರವರನ್ನು ಸ್ಥಳಕ್ಕೆ ಕರೆಸಿಕೊಂಡೆವು.

ಸದರಿ ಸ್ಥಳದಲ್ಲಿ 05 ಚಿಕ್ಕ ಗ್ಯಾಸ್ ಸಿಲಿಂಡರ್‌ಗಳು, 01 ಆಮ್ಲಜನಕ ಸಿಲಿಂಡರ್, ಗ್ಯಾಸ್ ಕಟ್ಟರ್, ಸ್ಕ್ರೂ ಡ್ರೈವರ್, 02 ಮಚ್ಚುಗಳು, 01 ಕಬ್ಬಿಣದ ರಾಡು, 01 ಕಬ್ಬಿಣದ ಹಾರೆ, 01 ಗ್ಯಾಸ್ ಪೈಪು ಮತ್ತು ಒಂದು ಪೆಟ್ಟಿಗೆ ಇದ್ದವು.

ಸದರಿ ಪೆಟ್ಟಿಗೆಯನ್ನು ತೆರೆದಿದ್ದು, ಅದರಲ್ಲಿ ನಗದು ಹಣ ಮತ್ತು ನಾಣ್ಯದ ಹಣ ಇತ್ತು. ಆ ಹಣ ರೂ. 3,87,000-00 ಆಗಿರುತ್ತದೆ. ನಾಣ್ಯದ ಹಣ ರೂ. 16,300-00 ಆಗಿರುತ್ತದೆ.

ಅಲ್ಲಿ ಬೆಳ್ಳಿ ಪದಾರ್ಥಗಳು ಇದ್ದು, 02 ಬೆಳ್ಳಿ ಬಸವ ಚಿಕ್ಕದ್ದು, 02 ಬೆಳ್ಳಿ ಕಣ್ಣುಗಳು, 02 ಬೆಳ್ಳಿ ತಟ್ಟೆಗಳು ಬೆಂಡಾಗಿದ್ದವು, ಬೇರೆ ಬೇರೆ ರೀತಿಯ ಬೆಳ್ಳಿ ಮಾದರಿಯ ಪದಾರ್ಥಗಳು ಮತ್ತು ಕರಗಿಸಿದ ಬೆಳ್ಳಿ ಗಟ್ಟಿ ಇದ್ದವು.

ಅಲ್ಲಿ 22 ಮೊಬೈಲ್ ಗಳು ಇದ್ದವು. ಸ್ಥಳದಲ್ಲಿ 02 ಮೋಟಾರ್ ಸೈಕಲ್ ಮತ್ತು ಎರಡು ಟಿ.ವಿ.ಎಸ್ ಮೊಪೆಡ್ ಇದ್ದವು.

ಸ್ಥಳದಲ್ಲಿ ಪಂಚನಾಮವನ್ನು ಮಧ್ಯಾಹ್ನ 3.45 ಗಂಟೆಯಿಂದ 6.45 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ಆ ಪಂಚನಾಮದ ಪ್ರತಿಯು ಈಗಾಗಲೇ ನಿಪಿ.3 ಎಂದು ಗುರುತಿಸಲ್ಪಟ್ಟಿದೆ.

ಸದರಿ ಸ್ಥಳದಲ್ಲಿ ಇದ್ದ 06 ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರಲ್ಲಿ ಈಗ ನ್ಯಾಯಾಲಯದ ಮುಂದೆ ಒಬ್ಬ ಇದ್ದು, ಅವರು 1ನೇ ಆರೋಪಿತನಾಗಿರುತ್ತಾನೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ಆರೋಪಿತರು ಫ್ರಾನ್ಸಿಸ್ ಚರ್ಚ್ ಬಳಿ ವ್ಯಾಪಾರಕ್ಕಾಗಿ ಟೆಂಟ್ ಹಾಕಿದ್ದರು ಎಂದರೆ ಅವರು ವಾಸ ಮಾಡಲು ಟೆಂಟ್ ಹಾಕಿದ್ದರು. ಆರೋಪಿತರು ಬೆಳಗ್ಗೆ ಕೆಲಸಕ್ಕೆ ಹೋದರೆ ಸಂಜೆ ಆ ಟೆಂಟ್ ಗೆ ಬರುತ್ತಿದ್ದರು ಎಂದರೆ ಅವರು ನಾವು ದಾಳಿ ಮಾಡಿದಾಗ ಅಲ್ಲೇ ಇದ್ದರು.

ನಾವು ಒಟ್ಟು 6 ಜನ ಪೊಲೀಸರು ಸ್ಥಳಕ್ಕೆ ಹೋಗಿದ್ದೆವು. ಅವರೆಂದರೆ ನಾನು, ಚಾಸಾ-6 ರಿಂದ 12 ಆಗಿರುತ್ತೇವೆ.

ನಾನು ಹೇಳುವಂತೆ ಆರೋಪಿತರ ಬಳಿ ಯಾವುದೇ ವಸ್ತುಗಳು ಇರಲಿಲ್ಲ, ಅವುಗಳನ್ನು ನಾವು ಜಪ್ತಿ ಪಡಿಸಿಲ್ಲ ಮತ್ತು ಪಂಚನಾಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**